ಗಂಡಸಿನ ರೂಪದಲ್ಲಿದ್ದ ಮಿ.ಕೆ.ಯ ಹೆಣ್ತನ ನನ್ನ ಗಂಡನ ಗಂಡಸುತನಕ್ಕಿಂತ ಹೆಚ್ಚು ನಿಖರವಾಗಿದೆ ಎಂದು ಎನ್ನಿಸುತ್ತಿತ್ತು.

ಗಂಡಸಿನ ದೇಹ ಸಂಪರ್ಕವಿಲ್ಲದೆ ಹತ್ತಾರು ವರ್ಷಗಳಾಗಿಹೋಗಿದ್ದವು. ಭಾವನಾತ್ಮಕ ಸಂಬಂಧವನ್ನು ಗಂಡ ತೋರಿಸಿರಲೇ ಇರಲಿಲ್ಲ. ಈ ಬಗ್ಗೆ ಯೋಚಿಸಿ ಅಳಲು ಸಮಯವಿಲ್ಲದಷ್ಟು ನನ್ನನ್ನು ನಾನು ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದೆ. ನನ್ನ ಎಲ್ಲ ಸಂತಸಗಳು ನನ್ನ ವೃತ್ತಿಯ ಯಶಸ್ಸಿನಲ್ಲೇ ಇದ್ದ ಕಾರಣ ನನ್ನ ಕೆಲಸವೇ ನನ್ನ ಸೋಲು ಗೆಲುವಿನ ಭೂಮಿಕೆಯಾಗಿತ್ತು. ನನ್ನ ವೃತ್ತಿಯ ಕುಶಲತೆಯನ್ನು ಕತ್ತಿಯ ಅಲುಗಿನಂತೆ ಚೂಪಾಗಿ ಇಟ್ಟುಕೊಂಡಿದ್ದೆ – ನನ್ನ ಬದುಕಿನ ಸಮತೋಲನಕ್ಕಾಗಿ.

★★★

"ಹಾಯ್... ಪ್ರೀಟಿ, ನಿನ್ನೆ ಏನಾಯಿತು ಗೊತ್ತಾ?" – ಅಂತ ಮಿ.ಕೆ. ಶುರುಮಾಡಿದನೆಂದರೆ ಬಾಯಿ ಮುಚ್ಚಿಸುವುದು ಕಷ್ಟವಾಗಿತ್ತು. ಮಿ.ಕೆ.ಗೆ ತನ್ನ ಬದುಕಿನ ಬಗ್ಗೆ, ಎಲ್ಲರಲ್ಲಿ ಹೇಳಿಕೊಳ್ಳುವ ಧಾವಂತವಿತ್ತು. ಜಗತ್ತಿಗೆ ತನ್ನಂತೆ ಇರುವ ಸಲಿಂಗಿಗಳ ಬಗ್ಗೆ ತಿಳಿಸಬೇಕೆನ್ನುವ, ಜಗತ್ತಿನ ಜನರನ್ನೆಲ್ಲ ಒಪ್ಪಿಸಬೇಕೆನ್ನುವ ಹಂಬಲ, ಒತ್ತಡ ಅವನಲ್ಲಿದ್ದಂತೆ ಕಾಣುತ್ತಿತ್ತು.

ಕೆಲವೊಮ್ಮೆ ಜಗತ್ತಿನ ಕಣ್ಣಲ್ಲಿ ಹೆಣ್ಣು–ಗಂಡು, ಉಳ್ಳವ–ಬಡವ, ಪೂರ್ವ–ಪಶ್ಚಿಮಗಳ ವ್ಯತ್ಯಾಸವೇ ಇನ್ನೂ ಅಳಿಯದಿರುವಾಗ ಸಲಿಂಗಕಾಮ ಮತ್ತು ಅದಕ್ಕೆ ಕಾನೂನು ರಕ್ಷಣೆ ಮತ್ತು ಸಾಮಾಜಿಕ ಒಪ್ಪಿಗೆ ಸಂಪೂರ್ಣವಾಗಿ ಸಿಗಲು ಇನ್ನೆಷ್ಟು ಕಾಲ ಬೇಕೋ ಎನ್ನುವ ಚಿಂತನೆಗೆ ನನ್ನನ್ನು ತಳ್ಳುತ್ತಿದ್ದ. ನನ್ನ ಸಮಸ್ಯೆಗಳು ನನಗೆ ಕೆಲವೊಮ್ಮೆ ಗೌಣವಾಗಿಯೂ ಮತ್ತೊಮ್ಮೆ ಭೀಕರವಾಗಿಯೂ ಕಾಣತೊಡಗಿದವು.

ಅವನು ಬಹುತೇಕ ಒಂಟಿಯಾಗಿ ಇರುತ್ತಿದ್ದ. ಆಗ ನಮ್ಮಿಬ್ಬರ ನಡುವೆ ಮಾತುಗಳು ಹರಿಯುತ್ತಿದ್ದವು. ಅವನಿಗೆ ಸಂಗಾತಿ ಸಿಕ್ಕಾಗ, ಜಗತ್ತಿನ ಲೆಕ್ಕಕ್ಕೆ ಸಂಬಂಧದಲ್ಲಿದ್ದ ನಾನು ಒಂಟಿಯಾಗುತ್ತಿದ್ದೆ!

ಅವನ ಸಂಬಂಧಗಳ ಘರ್ಷಣೆಗಳು ನನ್ನ ಮೂರು ಪಟ್ಟಿದ್ದವು. ಪಾಶ್ಚಾತ್ಯ ಸಮಾಜದ ವಿರುದ್ಧಲಿಂಗಿಗಳ ಸಂಬಂಧಗಳಿಗಿಂತ ವೇಗವಾಗಿ ಅವು ಬದಲಾಗುತ್ತಿದ್ದವು. ಸ್ಫುರದ್ರೂಪಿ ಸಂಗಾತಿಗಾಗಿ ಮಿ.ಕೆ.ಯ ಲೋಕದಲ್ಲಿ ಭಾರೀ ಪೈಪೋಟಿಯಿತ್ತು. ಆಯ್ಕೆಗಳು ಬಹಳ ಕಡಿಮೆಯಿದ್ದುದೇ ಇದಕ್ಕೆ ಕಾರಣ ಎನ್ನುವುದನ್ನು ಅವನು ನನಗೆ ವಿವರಿಸಿದ್ದ.

ಇವನ ತಂದೆತಾಯಿ ಮಗನ ಸಲಿಂಗತನವನ್ನು ಒಪ್ಪಿರಲಿಲ್ಲ. ಇವನ ಪಾಲಿಗೆ, ಹುಟ್ಟಿದ ಮಗನನ್ನು ಒಪ್ಪದ ತಂದೆತಾಯಿಯ ಜೊತೆ ಇರುವುದು ಅಸಾಧ್ಯವಾಗಿತ್ತು. ದೇಶ ಬಿಟ್ಟು ಇಂಗ್ಲೆಂಡನ್ನು ಸೇರಿದ್ದ. ಆಗೀಗ ಕರುಳು ತಡೆಯದೆ ವಯಸ್ಸಾದ ತಾಯಿಯನ್ನು ನೋಡಲು ಹೋಗುತ್ತಿದ್ದ. ಮರಳುವಾಗ ಮತ್ತಷ್ಟು ವ್ಯಗ್ರನಾಗಿ ಹಿಂತಿರುಗುತ್ತಿದ್ದ. ತಂದೆ ಇವನನ್ನು ಮಾತಾಡಿಸದೇ ಸತ್ತಿದ್ದ. ಆ ನೋವು ತಿರಸ್ಕಾರಗಳು ಅವನನ್ನು ರೋದಿಸುವಷ್ಟು ಬಾಧಿಸತ್ತಿದ್ದವು.

ಒಬ್ಬನೇ ಮಗನಾಗಿ ಹುಟ್ಟಿ, ಬುದ್ಧಿವಂತನಾಗಿ ಬೆಳೆದ ಇವನು ತನ್ನ ದೇಶದ ಸಂಪ್ರದಾಯದ ವಿರುದ್ಧ ಸಿಡಿದೆದ್ದಿದ್ದ. ಜರ್ಮನ್ನರು, ರಷ್ಯನ್ನರು, ಕಮ್ಯೂನಿಸ್ಟರು ತನ್ನ ದೇಶವನ್ನು ಛಿದ್ರ ಛಿದ್ರಗೊಳಿಸಿದ್ದರ ಬಗ್ಗೆ ಮಾತಾಡುತ್ತಿದ್ದ. ತನ್ನ ದೇಶದಲ್ಲಿನ ರಾಜಕೀಯ ಮತ್ತು ಸಲಿಂಗಕಾಮಿಗಳನ್ನು ದ್ವೇಷಿಸುವ ಸಂಪ್ರದಾಯಸ್ಥ ಜನರ ಬಗ್ಗೆ ಬಹಳ ಆಕ್ರೋಶ ವ್ಯಕ್ತಪಡಿಸುತ್ತಿದ್ದ. ಎಲ್.ಜಿ.ಬಿ.ಟಿ. ಹೋರಾಟ ಪೋಲೆಂಡಿನಲ್ಲೆಲ್ಲ ಹರಡಿತ್ತು. ಮನೆ ಮತ್ತು ದೇಶ ಎರಡಕ್ಕೂ ಸಲ್ಲದ ಅವನು ತನ್ನ ಇಷ್ಟಕ್ಕೆ ವಿರುದ್ಧವಾಗಿ ಎರಡನ್ನೂ ಬಿಟ್ಟು ಬಂದಿದ್ದ. ಆ ಸಿಟ್ಟು ಅವನಲ್ಲಿ ಮಡುಗಟ್ಟಿತ್ತು.